**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 12 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ವಿ ಟಿ ಶ್ರೀನಿವಾಸ
ತಂದೆಯ ಹೆಸರು : ವಾರ್ಸಿ ತಿಪ್ಪೇಸ್ವಾಮಿ
ವಯಸ್ಸು : 66 ವರ್ಷ
ಉದ್ಯೋಗ : ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರು
ವಾಸ : ದಾವಣಗೆರೆ

**ದಿನಾಂಕಃ 09-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಸಿದ್ದಾಪುರ ಉಪ ವಿಭಾಗದ ಜಿಲ್ಲಾ ಪಂಚಾಯತ ಇಂಜಿಯರಿಂಗ ವಿಭಾಗದಲ್ಲಿ ಕಿರಿಯ ಅಬಿಯಂತರರಾಗಿ 1997 ರಿಂದ 2004 ರವರಗೆ ಕರ್ತವ್ಯ ನಿರ್ವಹಿಸಿರುತ್ತೇನೆ. 2004 ರಲ್ಲಿ ನನಗೆ ಅಲ್ಲಿಂದ ಸೊರಬಗೆ ವರ್ಗಾವಣೆಯಾಯಿತು. ಸಿದ್ದಾಪುರ ಉಪ ವಿಭಾಗದ ಜಿಲ್ಲಾ ಪಂಚಾಯತ ಇಂಜಿಯರಿಂಗನಲ್ಲಿ ನಾನು ಕರ್ತವ್ಯ ನಿರ್ವಹಿಸುತ್ತಿದಾಗ ಕಾನಗೋಡ ಗ್ರಾಮಪಂಚಯತನಲ್ಲಿ ಸ್ವಚ್ಚ ಗ್ರಾಮ ಯೋಜನೆಯಲ್ಲಿ ಒಟ್ಟು ನಿಧಿಯಲ್ಲಿ ರೂ. 20,00,000/- ನ್ನು ರಸ್ತೆ ಕಾಮಗಾರಿ , ಚರಂಡಿ ಕೆಲಸ ಹಾಗೂ ಸಾರ್ವಜನಿಕ ಶೌಚಾಲಯ ಮತ್ತು 210 ವಯಕ್ತಿಕ ಶೌಚಾಲಯ ನಿರ್ಮಿಸಲು ಮಂಜೂರು ಆಯಿತು. ಅದರಲ್ಲಿ 120 ಅಸ್ತ್ರ ಒಲೆ ಸಹ ಮಂಜೂರು ಆಯಿತು. ಆ ಪೈಕಿ ಕಾನಗೂಡು ಗ್ರಾಮ ಪಂಚಾಯತಿರವರಿಗೆ ಅಸ್ತ್ರ ಒಲೆ ಮತ್ತು 210 ವಯಕ್ತಿಕ ಶೌಚಾಲಯ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಕ್ಕೆ ತರಲು ವಹಿಸಲಾಯಿತು. ವಯಕ್ತಿಕ ಶೌಚಾಲಯವನ್ನು ಫಲಾನುಭವಿಗಳು ಸ್ವತಃ ನಿರ್ಮಿಸಿಕೊಳ್ಳಬೇಕಾಗಿತ್ತು ಅದಕ್ಕೆ ಗ್ರಾಮ ಪಂಚಾಯತದಿಂದ ಸದರಿ ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗಳಿಗೆ ತಲಾ ರೂ. 3000/- ಸಹಾಯಧನವಾಗಿ ನೀಡಬೇಕಾಗಿತ್ತು. 2007 ರಲ್ಲಿ ಲೋಕಾಯುಕ್ತ ಪೋಲಸನವರು ನಾನು ವರ್ಗಾವಣೆಯಾಗಿ ಚಿತ್ರದುರ್ಗ ತಾಲೂಕಿನ ಒಳಲಕೆರೆಯಲ್ಲಿ ನಾನು ಕಿರಿಯ ಅಭಿಯಂತರ ಆಗಿದ್ದಾಗ ಪತ್ರ ಬರೆದು ಕಾನಗೂಡು ಗ್ರಾಮ ಪಂಚಾಯತಿಯಲ್ಲಿ ಮಂಜೂರದ ಮೇಲ್ಕಂಡ ವಯಕ್ತಿಕ ಶೌಚಾಲಯ ನಿರ್ಮಾಣದ ಕುರಿತು

ಅಳತೆ ಪುಸ್ತಕವನ್ನು ಬರೆದಿದ್ದಲ್ಲಿ ಅವರ ಮುಂದೆ ತಂದು ಹಾಜರುಪಡಿಸಬೇಕು ಎಂದು ಕೋರಿದ್ದರು. ಆದರೆ ವಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಅಳತೆ ಪುಸ್ತಕವನ್ನು ಬರೆದಿರಲಿಲ್ಲ ಮತ್ತು ನಿರ್ವಹಿಸಿರಲಿಲ್ಲ ಕಾರಣ ಅದು ಕೇವಲ ಸಹಾಯಧನ ಪಾವತಿ ಮಾಡುವ ಪ್ರಕರಣಗಳಾಗಿದ್ದವು . ಅಲ್ಲದೇ ಅದು ಟೆಂಡರ್ ಮೂಲಕ ನಿರ್ಮಾಣ ಆಗಿರಲಿಲ್ಲ , ವಯಕ್ತಿಕವಾಗಿ ಫಲಾನುಭವಿಗಳು ಅವರೇ ನಿರ್ಮಾಣ ಮಾಡಿಕೊಳ್ಳಬೇಕಿತ್ತು. ನಾನು ಆ ಬಗ್ಗೆ ಲಿಖಿತವಾಗಿ ಮಾಹಿತಿಯನ್ನು ಲೋಕಾಯುಕ್ತರವರಿಗೆ ನೀಡಿರುತ್ತೇನೆ.

**( ಸಾಕ್ಷಿ ಹೇಳಿದ ವರದಿ ಕಡತದಲ್ಲಿ ಹುಡುಕಲಾಗುತ್ತಿದ್ದು ಸಿಗುತ್ತಿಲ್ಲವಾದ್ದರಿಂದ ಸ್ವಲ್ಪ ಕಾಲ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

**ಸಾಕ್ಷಿಯನ್ನು ಪುನಃ ಮಧ್ಯಾಹ್ನ 1.25 ಗಂಟೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

2. ನಾನು ಲೋಕಾಯುಕ್ತ ಪೊಲೀಸ್ ನವರಿಗೆ ನೀಡಿದ ಮಾಹಿತಿ ಪತ್ರ ಗುರುತಿಸುತ್ತೇನೆ. ಈಗ ನೋಡಿದ ಪತ್ರ ನನ್ನ ಸ್ವಂತ ಕೈ ಬರಹದಲ್ಲಿ ನಾನು ಬರೆದು ಸಹಿ ಹಾಕಿ ನೀಡಿರುವ ಪತ್ರ ಆಗಿದೆ. ಅದನ್ನು ನಿ.ಪಿ. 48 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

3. ಪೊಲೀಸ್ ನವರು ನನ್ನ ಹೇಳಿಕೆಯನ್ನು ಈ ಪ್ರಕರಣದಲ್ಲಿ ಪಡೆದಿಲ್ಲ. ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿ ನಿರ್ವಹಣೆ ಮತ್ತು ಅದರ ಹಣಕಾಸಿನ ಜವಾಬ್ದಾರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಬರುತ್ತದೆ ಎಂದರೆ ವೈಯಕ್ತಿಕ ಶೌಚಾಲಯಕ್ಕೆ ಮತ್ತು ಅಸ್ತ್ರ ಒಲೆ ಕಾಮಗಾರಿಗೆ ಸಹಾಯ ಧನ ನೀಡುವ ವ್ಯಾಪ್ತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಬರುವುದಿಲ್ಲ ಅದು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ . ಬಾಕಿ ಕಾಮಗಾರಿಗಳ ಹಣಕಾಸಿನ ವ್ಯವಹಾರ ಮತ್ತು ನಿರ್ವಹಣೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಇತ್ತು . ಗ್ರಾಮ ಪಂಚಾಯತಿಗೆ ವೈಯಕ್ತಿಕ ಶೌಚಾಲಯ ಮತ್ತು ಅಸ್ತ್ರ ಒಲೆ ಕಾಮಗಾರಿಗೆ ಸಹಾಯ ಧನ ನೀಡುವ ವ್ಯಾಪ್ತಿ ಇತ್ತು ಎಂಬ ಬಗ್ಗೆ ಯಾವುದೇ ದಾಖಲಾತಿ ನಾನು ಹಾಜರುಪಡಿಸಿಲ್ಲ. ನಮ್ಮ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಜವಾಬ್ದಾರಿ ಇದ್ದರೂ ಸಹ ಕೇವಲ ಗ್ರಾಮ ಪಂಚಾಯತ್ ಮಾತ್ರ ಜವಾಬ್ದಾರಿ ಹೊಂದಿತ್ತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 48 ರಲ್ಲಿ ಕಾನಗೋಡು ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮಾತ್ರ ಜವಾಬ್ದಾರಿ ಆಗಿರುತ್ತಾರೆ ಎಂದು ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ